Digitally signed by SHRIDHARA H D
Date: 2026.04.08 13:20:23 +0530

SHRIDHARA H D

KACD320015652020

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್ ಸಿ ರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರು : ಶ್ರೀ. ಶ್ರೀಧರ ಹೆಚ್ ಡಿ
ಬಿ.ಎ., ಎಲ್.ಎಲ್.ಬಿ.
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್ ಸಿ, ಹಿರಿಯೂರು,.

**ಸಿ.ಸಿ. ನಂ. 1299 / 2020**

ದಿನಾಂಕ 06 ನೇ ಏಪ್ರಿಲ್ 2026

ಪಿರ್ಯಾದುದಾರರು: ಹಿರಿಯೂರು ನಗರ ಪೊಲೀಸ್ ಠಾಣೆ

(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತ/ರು :
1. ಪುಟ್ಟಮ್ಮ ಕೋಂ ಪದ್ದಣ್ಣ,
ವಯಸ್ಸು ಸುಮಾರು 49 ವರ್ಷ,
2. ಶಾಂತಲಾ ಬಿನ್ ಪದ್ದಣ್ಣ,
ವಯಸ್ಸು ಸುಮಾರು 20 ವರ್ಷ,
3. ಅಂಬಿಕಾ ಯಾನೆ ಅಂಬಕ್ಕ
ಬಿನ್ ಪದ್ದಣ್ಣ,
ವಯಸ್ಸು ಸುಮಾರು 30 ವರ್ಷ,
ವಾಸಃವೇದಾವತಿ ನಗರ,
ಹಿರಿಯೂರು ಟೌನ್.

(ಆರೋಪಿತರ ಪರ ಶ್ರೀ ಆರ್. ಬಿ. ಆರ್., ವಕೀಲರು)

| | | | |
|---|---|---|---|
| 01 | ಅಪರಾಧವು ಘಟಿಸಿದ ದಿನಾಂಕ | :- | 26.01.2020 |
| 02 | ಅಪರಾಧವನ್ನು ವರದಿ ಮಾಡಿದ ದಿನಾಂಕ | :- | 26.01.2020 |
| 03 | ದೂರುದಾರನ ಹೆಸರು | :- | ಸರೋಜಮ್ಮ |
| 04 | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | :- | 06.06.2024 |
| 05 | ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ | :- | 20.09.2024 |
| 06 | ಅಪರಾಧಗಳ ಕಲಂ ಗಳು | :- | ಭಾ. ದಂ. ಸಂ. ಕಲಂ 323 ಮತ್ತು 504 ಸಹಕಲಂ 34 |
| 07 | ನ್ಯಾಯಾಧೀಶರ ಅಂತಿಮ ನಿರ್ಣಯ | :- | ಖುಲಾಸೆ ಮಾಡಲಾಗಿದೆ |

SHRIDHARA H D
Digitally signed by SHRIDHARA H D
Date: 2026.04.08 13:20:32 +0530

(ಶ್ರೀಧರ ಹೆಚ್ ಡಿ)
ಪ್ರಧಾನ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.

**:- ತೀರ್ಪು -:**

ಹಿರಿಯೂರು ನಗರ ಪೋಲೀಸ್ ಠಾಣೆಯ ಅರಕ್ಷಕ ಮುಖ್ಯ ಪೇದೆ 1 ರಿಂದ 3 ನೇ ಆರೋಪಿತರುಗಳ ವಿರುದ್ಧ ಭಾ.ದಂ.ಸಂ. ಕಲಂಃ323 ಮತ್ತು 504 ಸಹ ಕಲಂ 34 ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ-**

ಸಾಕ್ಷಿ-1 ರವರ ಮಗಳು ಸಾಕ್ಷಿ-4 ರವರು ಅಂಬಲಗೆರೆ ಗ್ರಾಮದಲ್ಲಿ ಮನೆಕಟ್ಟಿಸುತ್ತಿದ್ದು, ನಿರ್ಮಾಣಕ್ಕೆ ಬೇಕಾದ ಸಾಮಾನುಗಳನ್ನು ಆರೋಪಿತರ ಸೈಟಿನಲ್ಲಿ ಹಾಕಿಸಿದ್ದು, ಈ ಬಗ್ಗೆ ಆರೋಪಿತರು ಸಾಮಾನುಗಳನ್ನು ತೆರವುಗೊಳಿಸುವಂತೆ ಹೇಳಿದ್ದಕ್ಕೆ ಸಾಕ್ಷಿ-1 ರವರು ಹೋಗಿ ನೀವೆಲ್ಲಾ ಸಂಬಂಧಿಕರು, ಅನುಸರಿಸಿಕೊಂಡು ಹೋಗಿ ಅಂತ ನ್ಯಾಯ ಪಂಚಾಯ್ತಿ ಮಾಡಿ

ಬಂದಿದ್ದು ಇದೇ ವಿಚಾರದ ದ್ವೇಷದಿಂದ ದಿನಾಂಕ 26.01.2020 ರಂದು 3-30 ಪಿ.ಎಂ ಸಮಯದಲ್ಲಿ ಸಾಕ್ಷಿ-1 ರವರು ಹಿರಿಯೂರು ನಗರ ಠಾಣಾ ಸರಹದ್ದು ಮುಖ್ಯ ರಸ್ತೆಯಲ್ಲಿರುವ ಜೂನಿಯರ್ ಕಾಲೇಜು ಮುಂದಿನ ಪುಟ್ ಪಾತ್ ರಸ್ತೆಯಲ್ಲಿ ಮಡಿಕೆ ವ್ಯಾಪರ ಮಾಡಿಕೊಂಡಿರುವಾಗ್ಗೆ ಆರೋಪಿತರೆಲ್ಲರೂ ಬಂದು ಬೋಸುಡಿ, ಮಿಂಡ್ರಿಗಳ, ನಾವು ಸೈಟಿನಲ್ಲಿ ಸಾಮಾನು ತೆಗೆಸಬೇಕೆಂದಿದ್ದರೆ ನೀನು ಬಂದು ನ್ಯಾಯ ಪಂಚಾಯ್ತಿ ಮಾಡುತ್ತೀಯ ಅಂತ ಬೈದಾಡಿದ್ದು 1 ನೇ ಆರೋಪಿತೆ ಸಾಕ್ಷಿ-1 ರವರ ಕೂದಲು ಹಿಡಿದು ಎಳೆದಾಡಿ ಕೆಳಗೆ ಬೀಳಿಸಿದ್ದು, ಆರೋಪಿತರೆಲ್ಲರೂ ಸೇರಿಕೊಂಡು ಕೈಕಾಲುಗಳಿಂದ ಸೊಂಟಕ್ಕೆ, ಮೈಕೈಗೆ ಹೊಡೆದು ನೋವುಂಟುಮಾಡಿ ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತಾರೆ ಎಂಬುದಾಗಿರುತ್ತದೆ.

**3.** ಚಾಸಾ-1- ರವರು ನೀಡಿದ ದೂರಿನ ಆಧಾರದ ಮೇಲೆ ಹಿರಿಯೂರು ಪೋಲೀಸರು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ 14/2020 ರಲ್ಲಿ ಭಾ. ದಂ. ಸಂ. ಕಲಂ ಕಲಂಃ323 ಮತ್ತು 504 ಸಹಕಲಂ 34 ರಡಿಯಲ್ಲಿ ಪ್ರಕರಣ ದಾಖಲು ಮಾಡಿ ಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುವುದಾಗಿದೆ.

**4.** ತನಿಖಾಧಿಕಾರಿಯು ಪ್ರಕರಣದ ತನಿಖೆ ಮುಕ್ತಾಯದ ನಂತರ ಆರೋಪಿತರ ವಿರುದ್ಧ ಭಾ.ದಂ.ಸಂ. ಕಲಂಃ323 ಮತ್ತು 504 ಸಹಕಲಂ 34 ರಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಅದನ್ನು ಪರಿಶೀಲಿಸಿ, ಸದರಿ ಕಲಂಗಳ ಅಡಿಯಲ್ಲಿನ ಅಪರಾಧಗಳಿಗೆ ಸಂಜ್ಞೆತೆಯನ್ನು ತೆಗೆದುಕೊಂಡು ಆರೋಪಿತರುಗಳಿಗೆ ನ್ಯಾಯಾಲಯದಿಂದ ಸಮನ್ಸ್ ನೀಡಲಾಗಿ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ.

**5.** ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿತರಿಗೆ ನೀಡಿ, ನಂತರ ಆರೋಪಿತರ ಪರ ವಕೀಲರು ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರ ವಾದ ಆಲಿಸಿ, ಆರೋಪಿತರುಗಳ ವಿರುದ್ಧ ಭಾ.ದಂ.ಸಂ. ಕಲಂಃ323 ಮತ್ತು 504 ಸಹಕಲಂ 34 ರಡಿ ಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿಗಳಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ ವಿವರಿಸಲಾಯಿತು, ಆರೋಪಿತರು ತಮ್ಮ ವಿರುದ್ಧದ ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆ ಆಗಬೇಕೆಂದು ಕೇಳಿ ಕೊಂಡಿರುತ್ತಾರೆ.

**6.** 1 ರಿಂದ 4 ನೇ ಆರೋಪಿತರುಗಳ ಮೇಲಿನ ಆರೋಪವನ್ನು ಸಾಭೀತು ಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 05 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 5 ರಂತೆ ವಿಚಾರಣೆಗೆ ಒಳಪಡಿಸಿಕೊಂಡು, ಒಟ್ಟು 07 ದಾಖಲಾತಿಗಳನ್ನು ಗುರುತಿಸಿ ಕೊಂಡಿರುತ್ತದೆ.

**7.** ಅಭಿಯೋಜನೆಯ ಸಾಕ್ಷ್ಯ ವಿಚಾರಣೆ ಮುಕ್ತಾಯದ ನಂತರ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿತರುಗಳ ಹೇಳಿಕೆಯನ್ನು ದಾಖಲು ಮಾಡಿ ಕೊಳ್ಳಲಾಯಿತು. ಆರೋಪಿತರುಗಳು ತಮ್ಮ ವಿರುದ್ಧದ ಅಭಿಯೋಜನೆಯ ಸಾಕ್ಷ್ಯವನ್ನು ಸ್ಪಷ್ಟವಾಗಿ ಅಲ್ಲಗಳೆದು, ತಮ್ಮ ಪರವಾಗಿ ಪ್ರತಿವಾದ ಸಾಕ್ಷ್ಯಮಂಡಿಸುವುದಿಲ್ಲ ಎಂದಿರುತ್ತಾರೆ .

**8.** ಪ್ರಕರಣದಲ್ಲಿ ಉಭಯ ಪಕ್ಷಕಾರರ ವಾದ ಆಲಿಸಿ, ಕಡತ ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುತ್ತವೆ.

: **ಅಂಶಗಳು** :

1. ದಿನಾಂಕ 26.01.2020 ರಂದು 3-30 ಪಿ.ಎಂ ಸಮಯದಲ್ಲಿ ಸಾಕ್ಷಿ-1 ರವರು ಹಿರಿಯೂರು ನಗರ ಠಾಣಾ ಸರಹದ್ದು ಮುಖ್ಯ ರಸ್ತೆಯಲ್ಲಿರುವ ಜೂನಿಯರ್ ಕಾಲೇಜು ಮುಂದಿನ ಪುಟ್ ಪಾತ್ ರಸ್ತೆಯಲ್ಲಿ ಮಡಿಕೆ ವ್ಯಾಪರ ಮಾಡಿಕೊಂಡಿರುವಾಗ್ಗೆ ಆರೋಪಿತರೆಲ್ಲರೂ ಬಂದು ಬೋಸುಡಿ, ಮಿಂಡ್ರಿಗಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡುವ ಮಾಡುವ ಮೂಲಕ ಭಾ ದಂ ಸಂ ಕಲಂ 504 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಎಸಗುವ ಸಮಾನ ಇಚ್ಚೆಯಿಂದ ಒಂದುಗೂಡಿ, ಅವರ ಪೈಕಿ 1 ನೇ ಆರೋಪಿತೆ ಸಾಕ್ಷಿ-1 ರವರ ಕೂದಲು ಹಿಡಿದು ಎಳೆದಾಡಿ ಕೆಳಗೆ ಬೀಳಿಸಿದ್ದು, ಆರೋಪಿತರೆಲ್ಲರೂ ಸೇರಿಕೊಂಡು ಕೈಕಾಲುಗಳಿಂದ ಸೊಂಟಕ್ಕೆ, ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡುವ ಮೂಲಕ ಭಾ ದಂ ಸಂ ಕಲಂ 323 ಸಹವಾಚಕ 34 ರನ್ವಯ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಅಭಿಯೋಜನೆಯು ಸಂಶಯಾ ತೀತವಾಗಿ ಸಾಭೀತು ಪಡಿಸುತ್ತದೆಯೇ?

3) ಯಾವ ಆದೇಶ ?

**9.** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

ಅಂಶ 1: ನಕಾರಾತ್ಮಕವಾಗಿ,

ಅಂಶ 2: ನಕಾರಾತ್ಮಕವಾಗಿ,

ಅಂಶ 3: ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶ,

**ಕಾ ರ ಣ ಗ ಳು**

**10. ಅಂಶ 1 ಮತ್ತು 2 :-** ಈ ಎರಡು ಅಂಶಗಳು ಏಕಘಟನೆಯಿಂದ ಉದ್ಭವಿಸಿರುವುದರಿಂದ ಚರ್ಚೆಯ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ 02 ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಅಭಿಯೋಜನೆಯು ಆರೋಪಿತರುಗಳ ಮೇಲಿನ ಆರೋಪಗಳನ್ನು ಸಾಭೀತುಪಡಿಸುವ ಸಲುವಾಗಿ ಒಟ್ಟು 05 ಜನ ಸಾಕ್ಷಿದಾರರನ್ನು ಫ್ರಾಸಾ-1 ರಿಂದ 5 ರಂತೆ ವಿಚಾರಣೆಗೆ ಒಳಪಡಿಸಿ ಕೊಂಡು, ಒಟ್ಟು 07 ದಾಖಲಾತಿಗಳನ್ನು ನಿಪಿ-1 ರಿಂದ 7 ರಂತೆ ಗುರುತಿಸಿ ಕೊಂಡಿರುತ್ತದೆ.

**11.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವನ್ನು ಈಗಾಗಲೇ ಹೇಳಲಾಗಿರುತ್ತದೆ. ಫ್ರಾಸಾ-1 ಸರೋಜಮ್ಮ ದೂರುದಾರ/ ನೊಂದ ವ್ಯಕ್ತಿ, ಫ್ರಾಸಾ-2 ಲಕ್ಷ್ಮಿದೇವಿ ಇವರು ಪ್ರತ್ಯಕ್ಷದರ್ಶಿ ಸಾಕ್ಷಿದಾರರು, ಫ್ರಾಸಾ-3 ನರಸಿಂಹಯ್ಯ ಸಾಂದರ್ಭಿಕ ಸಾಕ್ಷಿದಾರರು, ಫ್ರಾಸಾ-4 ಡಾಃ ನಿರಂಜನ್ ವೈಧ್ಯಾಧಿಕಾರಿಗಳು , ಫ್ರಾಸಾ-5 ಪಿ. ಕೆ. ಇಬ್ರಾಹಿಂ ಖಲೀಲ್ ಪೊಲೀಸ್/ ತನಿಖಾಧಿಕಾರಿ ಇರುತ್ತಾರೆ. ನಿಪಿ-1 ಹೇಳಿಕೆ ದೂರು, ನಿಪಿ-2 ಸ್ಥಳ ಮಹಜರು, ನಿಪಿ-3 ಗಾಯದ ಪ್ರಮಾಣ ಪತ್ರ, ನಿಪಿ-4 ಸ್ವೀಕೃತಿ, ನಿಪಿ-5 ತನಿಖೆ ನಡೆಸಲು

ಅನುಮತಿ ನೀಡಲು ಕೋರಿ, ನಿಪಿ-6 ಪ್ರಥಮ ವರ್ತಮಾನ ವರದಿ, ನಿಪಿ-7 ಆಸ್ಪತ್ರೆಯ ಮೆಮೋ ಇರುತ್ತವೆ.

**12.** ಪ್ರಾಸಾ-1 ಸರೋಜಮ್ಮ ಇವರು ದೂರುದಾರರಿದ್ದು ತನ್ನ ಸಾಕ್ಷ್ಯದಲ್ಲಿ ಈಗ 4 ವರ್ಷಗಳ ಹಿಂದೆ ಒಂದು ದಿನ ಮಧ್ಯಾಹ್ನ ಹಿರಿಯೂರು ನಗರದ ಸರ್ಕಾರಿ ಆಸ್ಪತ್ರೆಯ ಮುಂಭಾಗ ಮಡಿಕೆ ಅಂಗಡಿ ಹತ್ತಿರ ಕುಳಿತುಕೊಂಡಿದ್ದಾಗ ಅಲ್ಲಿಗೆ ಆರೋಪಿತರು ಬಂದು ತನಗೆ ಏಕಾಏಕಿ ಹಲ್ಲೆ ಮಾಡಿರುತ್ತಾರೆ. ನಂತರ ಅಲ್ಲಿಂದ ಓಡಿ ಹೋಗಿರುತ್ತಾರೆ. ತನ್ನನ್ನು ಉದ್ದೇಶಿಸಿ ಬೊಸುಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ. ಕೊಲೆ ಮಾಡುವುದಾಗಿ ಜೀವ ಬೆದರಿಕೆ ಹಾಕಿರುತ್ತಾರೆ. ಹಲ್ಲೆಯಿಂದ ತನ್ನ ಕೈಕಾಲುಗಳಿಗೆ, ಬೆನ್ನಿಗೆ, ಸೊಂಟಕ್ಕೆ ಮತ್ತು ಮೈಕೈಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಹಲ್ಲೆಯಾದ ಬಳಿಕ ತಾನು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಗೆ ಪೊಲೀಸ್‌ರು ಬಂದಿದ್ದು ಅವರಿಗೆ ದೂರನ್ನು ನೀಡಿರುತ್ತೇನೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ-4 ರವರು ಅಂಬಲಗೆರೆ ಗ್ರಾಮದಲ್ಲಿ ಮನೆ ಕಟ್ಟಲು ಬೇಕಾದಗ ಸಾಮಾನುಗಳನ್ನು ಆರೋಪಿತರ ಜಾಗದಲ್ಲಿ ಹಾಕಿಸಿದ್ದು ಈ ವಿಚಾರಕ್ಕೆ ಗಲಾಟೆಯಾದಾಗ ತಾನು ಅವರಿಗೆ ನೀವೆಲ್ಲಾ ಸಂಬಂಧಿಕರಾಗಿದ್ದು ಅನುಸರಿಸಿಕೊಂಡು ಹೋಗಿ ಎಂದು ಹೇಳಿರುತ್ತೇನೆ ಎಂಬ ಸೂಚನೆಯನ್ನು ಅಲ್ಲಗಳೆದು ಅದೇ ದ್ವೇಷದಿಂದ ದಿನಾಂಕಃ26.01.2020 ರಂದು ಸಂಜೆ 3.30 ಗಂಟೆಗೆ ಹಿರಿಯೂರು ನಗರದ ಮುಖ್ಯ ರಸ್ತೆಯಲ್ಲಿರುವ ಜೂನಿಯರ್ ಕಾಲೇಜು ಮುಂದಿನ ಪುಟ್‌ಪಾತ್‌ನಲ್ಲಿ ಮಡಿಕೆ ಇಟ್ಟುಕೊಂಡು ಕುಳಿತುಕೊಂಡಿದ್ದಾಗ ಆರೋಪಿತರು ಬಂದು ತನ್ನನ್ನು ಉದ್ದೇಶಿಸಿ ಮಿಂಡ್ರಗಾಳಿ ಪಂಚಾಯಿತಿ ಮಾಡುತ್ತೀಯಾ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಈ ವಿಷಯದ ಬಗ್ಗೆ ತಾನು ಪೊಲೀಸ್‌ರಿಗೆ ದೂರು ನೀಡಿರುತ್ತೇನೆ ದಿನಾಂಕ.27.01.2020 ರಂದು

ಪೊಲೀಸ್‌ರು ಘಟನಾ ಸ್ಥಳಕ್ಕೆ ಬಂದಿದ್ದು ತಾನು ತೋರಿಸಿಕೊಟ್ಟಂತೆ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ತಯಾರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

**13.** ಫ್ರಾಸಾ–1 ರವರನ್ನು ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಆರೋಪಿತರು ಚಾಸಾ–4 ರವರ ಗಂಡನ ಮನೆಯಿಂದ ಸಂಬಂಧಿಕರು. ಮನೆ ಕಟ್ಟಲು ಮರಳನ್ನು ಚಾಸಾ–4 ರವರು ತಂದು ಹಾಕಿದ್ದರು. ಈ ವಿಷಯಕ್ಕಾಗಿ ಆರೋಪಿತರು ನಮ್ಮ ಜಾಗದಲ್ಲಿ ಏಕೆ ಮರಳು ಹಾಕಿದ್ದೀರಿ ಎಂದು ಕೇಳಿದ್ದರು. ನಿಪಿ–1 ಮತ್ತು 2 ರ ವಿಚಾರ ತನಗೆ ಗೊತ್ತಿಲ್ಲ. ಚಾಸಾ–3 ಮತ್ತು ತನ್ನ ಅಳಿಯನ ಮೇಲೆ 2 ನೇ ಆರೋಪಿ ಒಂದು ದೂರು ಸಲ್ಲಿಸಿರುತ್ತಾರೆ. ಅದು ಕ್ರಿಮಿನಲ್ ಪ್ರಕರಣ ಸಂಖ್ಯೆ:1313/2020 ರಂದು ದಾಖಲಾಗಿರುತ್ತದೆ ಎಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

**14.** ಫ್ರಾಸಾ–2 ಲಕ್ಷ್ಮಿದೇವಿ ಇವರು ಪ್ರತ್ಯಕ್ಷದರ್ಶಿ ಇದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ ಅಂದಾಜು ಒಂದು ವರ್ಷಗಳ ಹಿಂದೆ ತಾನು ಮತ್ತು ಚಾಸಾ–1 ರವರು ಹಿರಿಯೂರು ನಗರದ ಸರ್ಕಾರಿ ಆಸ್ಪತ್ರೆಯ ಮುಂಭಾಗ ವ್ಯಾಪಾರಕ್ಕಾಗಿ ಅಂಗಡಿಗಳನ್ನು ಹಾಕಿಕೊಂಡು ಕುಳಿತಿದ್ದೆವು. ತಾನು ಅರಿಶಿನ ಕುಂಕುಮದ ಅಂಗಡಿ ಹಾಕಿದ್ದೆನು. ಚಾಸಾ–1 ರವರು ಮಡಿಕೆ ಅಂಗಡಿಯನ್ನು ಇಟ್ಟುಕೊಂಡಿದ್ದರು. ಮಧ್ಯಾಹ್ನ 2.30 ರ ಸಮಯಕ್ಕೆ ಆಟೋದಲ್ಲಿ ಒಟ್ಟು ಮೂರು ಜನ ಹೆಣ್ಣು ಮಕ್ಕಳು ಬಂದು ಏಕಾಏಕಿ ಚಾಸಾ–1 ರವರ ಬೆನ್ನಿಗೆ ಮತ್ತು ಮೈಕೈಗೆ ಹೊಡೆದರು. ಕೋಲಿನಿಂದ ಮಡಿಕೆಗಳನ್ನು ಒಡೆದು ಹಾಕಿದರು. ಚಾಸಾ–1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ. ಚಾಸಾ–1 ರವರಿಗೆ ಬೆನ್ನಿಗೆ, ಮೈಕೈಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಅಜ್ಜಿಗೆ ಜ್ಞಾನ ತಪ್ಪಿರುತ್ತದೆ. ಪೊಲೀಸ್‌ರು ತನಗೆ ಘಟನೆಯ ಬಗ್ಗೆ ವಿಚಾರಣೆ ಮಾಡಿದ್ದು ತಾನು ಅವರಿಗೆ ಹೇಳಿಕೆ ನೀಡಿರುತ್ತೇನೆ. ಆಟೋದಲ್ಲಿ ಬಂದ ಮೂರು ಜನ ಹೆಣ್ಣು

ಮಕ್ಕಳನ್ನು ಗುರುತಿಸುತ್ತೇನೆ. ಅದರೆ ಅದರಲ್ಲಿ ಇಬ್ಬರ ಹೆಸರು ತನಗೆ ಗೊತ್ತಿಲ್ಲ. ಒಬ್ಬರ ಹೆಸರು ಭಾಗ್ಯಮ್ಮ ಆಗಿರುತ್ತದೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ–2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಘಟನೆ ನಡೆದ ದಿನಾಂಕಃ26.01.2020 ರಂದು ಮದ್ಯಾಹ್ನ 3.30 ಮತ್ತು ಆರೋಪಿತರ ಹೆಸರು ಪುಟ್ಟಮ್ಮ, ಶಾಂತಲಾ ಮತ್ತು ಅಂಭಿಕ ಎಂಬ ಸೂಚನೆಗೆ ಇರಬಹುದು ಎಂದು ಉತ್ತರಿಸಿರುತ್ತಾರೆ.

**15.** ಸದರಿ ಫ್ರಾಸಾ–2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಆ ದಿನ ತನ್ನ ಅಂಗಡಿಯ ಹತ್ತಿರ ಇದ್ದೆನು. ಪೊಲೀಸ್‌ರಿಗೆ ಹೇಳಿಕೆ ಕೊಟ್ಟ ದಿನಾಂಕ ತನಗೆ ನೆನಪಿಲ್ಲ. ಈ ಕೇಸಿಗೆ ಸಂಬಂಧಿಸಿ ತಾನು ಒಂದು ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಆಟೋದಲ್ಲಿ ಬಂದಿರುತ್ತಾರೆ ಎಂದು ಹೇಳಿದ್ದು ಅದರ ನೋಂದಣಿ ಸಂಖ್ಯೆ ತನಗೆ ಗೊತ್ತಿಲ್ಲ. ಆರೋಪಿತರ ಹೆಸರುಗಳು ತನಗೆ ಗೊತ್ತಿಲ್ಲ. ಅವರು ಯಾವ ಊರಿನವರು ಎಂದು ತನಗೆ ಗೊತ್ತಿಲ್ಲ. ಅವರ ಹೆಸರುಗಳನ್ನು ತಿಳಿಯಲು ಪ್ರಯತ್ನಿಸಿರುವುದಿಲ್ಲ. ಪೊಲೀಸ್‌ರಿಗೆ ಹೇಳಿಕೆ ನೀಡುವಾಗ ಆರೋಪಿತರ ಹೆಸರನ್ನು ಹೇಳಿರುವುದಿಲ್ಲ. ನಿಖರವಾಗಿ ಯಾವ ಯಾವ ಆರೋಪಿತರು ಚಾಸಾ–1 ರವರಿಗೆ ಎಲ್ಲಿ ಹೊಡೆದಿರುತ್ತಾರೆ ಎಂದು ತನಗೆ ಹೇಳಲು ಆಗುವುದಿಲ್ಲ. ಚಾಸಾ–1 ರವರು ತನಗೆ ತುಂಬಾ ವರ್ಷಗಳಿಂದ ಪರಿಚಯ ಇರುತ್ತಾರೆ. ಘಟನಾ ಸ್ಥಳದಲ್ಲಿ ತುಂಬಾ ಜನರು ಓಡಾಡುತ್ತಾರೆ. ಘಟನೆ ನಡೆದಾಗ ತುಂಬಾ ಸಾರ್ವಜನಿಕರು ಸೇರಿದ್ದು ಗಲಾಟೆ ಬಿಡಿಸಲು ಪ್ರಯತ್ನಿಸಿರುತ್ತಾರೆ. ಅವರ ಹೆಸರುಗಳು ತನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ.

**16.** ಫ್ರಾಸಾ–3 ನರಸಿಂಹಯ್ಯ ಇವರು ಸಾಂದರ್ಭಿಕ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ–4 ರವರು ಅಂಬಲಗೆರೆಯಲ್ಲಿ ಸೈಟಿನ

ವಿಚಾರವಾಗಿ ಅವರ ಗಂಡನ ಮನೆಯವರ ಕಡೆ ಗಲಾಟೆಯಾಗಿತ್ತು. ಆ ವಿಷಯದಲ್ಲಿ ಚಾಸಾ–1 ರವರು ನ್ಯಾಯ ಪಂಚಾಯಿತಿ ಮಾಡಿ ಅನುಸರಿಸಿಕೊಂಡು ಹೋಗಿ ಎಂದು ಹೇಳಿ ಬಂದಿರುತ್ತಾರೆ. ಅದೇ ವಿಚಾರವಾಗಿ ದಿನಾಂಕಃ 26.01.2020 ರಂದು ಮಧ್ಯಾಹ್ನ 2.00 ಗಂಟೆ ಸುಮಾರಿಗೆ ಚಾಸಾ–1 ರವರು ಹಿರಿಯೂರು ನಗರದ ಸರ್ಕಾರಿ ಆಸ್ಪತ್ರೆಯ ಮುಂಭಾಗ ವ್ಯಾಪಾರಕ್ಕಾಗಿ ಅಂಗಡಿ ಹಾಕಿಕೊಂಡು ಕುಳಿತಿದ್ದಾಗ ಆರೋಪಿತರು ಏಕಾಏಕಿ ಬಂದು ಚಾಸಾ–1 ರವರಿಗೆ ಹಲ್ಲೆ ಮಾಡಿರುತ್ತಾರೆ. ಚಪ್ಪಲಿ ಕಾಲಿನಲ್ಲಿ ಚಾಸಾ–1 ರವರನ್ನು ತುಳಿದಿರುತ್ತಾರೆ. ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ನಂತರ ಆಟೋದಲ್ಲಿ ಅಲ್ಲಿಂದ ಹೋಗಿರುತ್ತಾರೆ. ಈ ವಿಷಯವನ್ನು ಚಾಸಾ–2 ರವರು ತನಗೆ ಫೋನ್ ಮಾಡಿ ತಿಳಿಸಿದರು. ತಾನು ಆಗ ನೇರವಾಗಿ ಘಟನಾ ಸ್ಥಳಕ್ಕೆ ಬಂದಿದ್ದು ಚಾಸಾ–1 ರವರನ್ನು ಆಸ್ಪತ್ರೆಗೆ ಸೇರಿಸಿರುತ್ತೇನೆ. ಚಾಸಾ–1 ರವರಿಗೆ ಸೊಂಟಕ್ಕೆ, ಬೆನ್ನಿಗೆ ಮತ್ತು ಕೈಗಳಿಗೆ ಸಾಮಾನ್ಯ ಸ್ವರೂಪದ ಗಾಯಳಾಗಿರುತ್ತವೆ. ಪೊಲೀಸ್‌ರು ತನಗೆ ಘಟನೆಯ ಬಗ್ಗೆ ವಿಚಾರಣೆ ಮಾಡಿದ್ದು ತಾನು ಅವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

**17.** ಸದರಿ ಪ್ರಾಸಾ–3 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ಈ ಕೇಸಿಗೆ ಸಂಬಂಧಿಸಿ ತಾನು 2–3 ಬಾರಿ ಠಾಣೆಗೆ ಹೋಗಿರುತ್ತೇನೆ. ಪೊಲೀಸ್‌ರಿಗೆ ದೂರನ್ನು ತಾನೇ ಹೇಳಿ ಬರೆಸಿರುತ್ತೇನೆ. ಪೊಲೀಸ್‌ರಿಗೆ ದೂರು ನೀಡಿ 10 ದಿನಗಳಾದ ನಂತರ ಹೇಳಿಕೆ ನೀಡಿರುತ್ತೇನೆ. ಆರೋಪಿತರು ಮತ್ತು ಚಾಸಾ–4 ರವರು ಸಂಬಂಧಿಕರು. ನಿವೇಶನದ ವಿಚಾರಕ್ಕಾಗಿ ಅವರ ಮಧ್ಯ ಗಲಾಟೆಯಾಗುತ್ತಿತ್ತು. ಚಾಸಾ–1 ರವರು ಗಲಾಟೆ ನಡೆದ 2–3 ದಿನಗಳ ಹಿಂದೆ ರಾಜೀ ಪಂಚಾಯಿತಿ ಮಾಡಿದ್ದರು. ಗಲಾಟೆಯನ್ನು ತಾನು ಕಣ್ಣಾರೆ ನೋಡಿಲ್ಲ 2 ನೇ ಆರೋಪಿ ತನ್ನ ಭಾವನ ಮೇಲೆ

ಒಂದೂ ದೂರನ್ನು ನೀಡಿರುತ್ತಾರೆ ಅದು ಕ್ರಿಮಿನಲ್ ಪ್ರಕರಣ ಸಂಖ್ಯೆ:1313/20 ಎಂದು ದಾಖಲಾಗಿರುತ್ತದ ಎಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

**18.** ಫ್ರಾಸಾ–4 ಡಾಃ ನಿರಂಜನ್. ಬಿ. ಹೆಚ್ ವೈಧ್ಯಾಧಿಕಾರಿಗಳು ಇವರು ತಮ್ಮ ಸಾಕ್ಷ್ಯದಲ್ಲಿ 26.01.2020 ರಂದು ಸಂಜೆ 4–15 ರ ಸುಮಾರಿಗೆ ಚಾಸಾ–1 ರವರು ಹಲ್ಲೆ ನಡೆಸಿದ ಆರೋಪದ ಮೇಲೆ ಆಸ್ಪತ್ರೆಗೆ ಬಂದಿದ್ದು, ಚಾಸಾ–1 ರವರನ್ನು ವೈಧ್ಯಕೀಯ ಪರೀಕ್ಷೆ ಮಾಡಿದಾಗ ಬಲಗೈ ಮುಂಭಾಗ ಮತ್ತು ಸೊಂಟದ ಭಾಗದಲ್ಲಿ ನೋವಿನ ಒಳಗಾಯಗಳು ಕಂಡುಬಂದಿರುತ್ತವೆ. ಸಾಮಾನ್ಯ ಸ್ವರೂಪದ್ದಾಗಿವೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀಸಾವಲಿನಲ್ಲಿ, ಒಬ್ಬ ವ್ಯಕ್ತಿ ಮೇಲಿನಿಂದ ಬಿದ್ದರೆ ಮೇಲ್ಕಂಡ ಗಾಯಾಗಳು ಆಗಬಹುದು ಹಾಗೂ ನಿಪಿ–3 ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಗಾಯಗಳನ್ನು ಚಾಸಾ–1 ರವರು ಹೇಳಿದಂತೆ ನಮೂದಿಸಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

**19.** ಫ್ರಾಸಾ–7 ಪಿ.ಕೆ. ಇಬ್ರಾಹಿಂ ಖಲೀಲ್ ಇವರು ತನಿಖಾಧಿಕಾರಿಗಳಾಗಿದ್ದು ತಮ್ಮ ತನಿಖೆ ಅನುಗುಣವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸಾವಲಿನಲ್ಲಿ ನಿಪಿ–2 ರಲ್ಲಿ ಸಮಯ ಬರೆಯುವಾಗ ತಿದ್ದುಪಡಿಯಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

**20.** ಅಭಿಯೋಜನೆಯ ಪ್ರಕಾರ ದಿನಾಂಕಃ26.01.2020 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಹಿರಿಯೂರು ಜೂನಿಯರ್ ಕಾಲೇಜು ಮುಂದಿನ ಫುಟ್‌ಬಾತ್ ರಸ್ತೆಯಲ್ಲಿ ಫ್ರಾಸಾ–1 ರವರು ಮಡಿಕೆ ವ್ಯಾಪಾರ ಮಾಡುತ್ತಿದ್ದಾಗ ಆರೋಪಿತರು ಅಲ್ಲಿಗೆ ಬಂದು ಫ್ರಾಸಾ–1 ರವರಿಗೆ ಅವಾಚ್ಯ

ಶಬ್ದಗಳಿಂದ ಬೈದು ಕೂದಲು ಹಿಡಿದು ಕೆಳಗೆ ತಳ್ಳಿ ಕೈ ಕಾಲುಗಳಿಂದ ಹೊಡೆದು ಗಾಯಗೊಳಿಸಿದ್ದಾರೆ ಎಂಬುದಾಗಿದೆ.

**21.** ಫ್ರಾಸಾ-1 ರವರು ಈ ಪ್ರಕರಣದ ದೂರುದಾರ ಮತ್ತು ನೊಂದ ಸಾಕ್ಷಿದಾರರಾಗಿದ್ದಾರೆ ಮತ್ತು ಫ್ರಾಸಾ-3 ರವರು ಫ್ರಾಸಾ-1 ರವರ ಮಗನಾಗಿದ್ದು ಹೇಳಿಕೆ ಸಾಕ್ಷಿದಾರರಾಗಿದ್ದಾರೆ. ಫ್ರಾಸಾ-1 ಮತ್ತು 3 ರವರು ತಮ್ಮ ಸಾಕ್ಷ್ಯದಲ್ಲಿ ಫ್ರಾಸಾ-3 ಮತ್ತು ಫ್ರಾಸಾ-1 ರವರ ಅಳಿಯನ ಮೇಲೆ 2 ನೇ ಆರೋಪಿ ದೂರು ನೀಡಿದ್ದು, ಅದು ಕ್ರಿಮಿನಲ್ ಪ್ರಕರಣ ಸಂಖ್ಯೆ:1313/2020 ಎಂದು ದಾಖಲೆ ಅಗಿರುತ್ತದೆ ಎಂದು ಸಾಕ್ಷ್ಯ ನುಡಿದಿದ್ದು, ಆರೋಪಿತರು ಮತ್ತು ಫ್ರಾಸಾ-1 ಹಾಗೂ 3 ರವರ ನಡುವೆ ದೂರು ಪ್ರತಿ ದೂರಗಳು ಇದ್ದು ಪರಸ್ಪರ ವೈಷಮ್ಯ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಫ್ರಾಸಾ-1 ಮತ್ತು 3 ರವರ ಸಾಕ್ಷ್ಯವನ್ನು ಎಚ್ಚರಿಕೆಯಿಂದ ಪರಿಶೀಲಿಸುವುದು ಅಗತ್ಯವಾಗಿದೆ.

**22.** ಮೊದನೆಯದಾಗಿ ಸದರಿ ಘಟನೆಯು ಹಿರಿಯೂರು ಮುಖ್ಯ ರಸ್ತೆಯಲ್ಲಿರುವ ಜೂನೀಯರ್ ಕಾಲೇಜು ಮುಂಭಾಗ ಪುಟ್‌ಬಾತ್ ಆಗಿದೆ. ಅದರಂತೆ ಫ್ರಾಸಾ-5 ತನಿಖಾಧಿಕಾರಿ ಚಾಸಾ-5 ಮತ್ತು 6 ಸಮಕ್ಷಮ ನಿಪಿ-2 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ. ಆದರೆ ಸದರಿ ಪಂಚನಾಮೆಯ ಸಾಕ್ಷಿದಾರರಾದ ಚಾಸಾ-5 ಮತ್ತು 6 ರವರು ಅಭಿಯೋಜನೆಯು ವಿಚಾರಣೆಗೆ ಒಳಪಡಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ನಿಪಿ-2 ಪಂಚನಾಮೆ ಸಾಭೀತು ಆಗಿರುವುದಿಲ್ಲ. ಮುಂದುವರೆದು ಫ್ರಾಸಾ-1 ರವರು ತನಗೆ ನಿಪಿ-2 ರ ವಿವರ ಗೊತ್ತಿಲ್ಲ ನಿಪಿ-2 ಕ್ಕೆ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ ಮತ್ತು ಅದಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿದ್ದು, ನಿಪಿ-2 ರಂತೆ ಸ್ಥಳ ಪಂಚನಾಮೆಯನ್ನು ಜರುಗಿಸಿದ ಬಗ್ಗೆ ಸಂಶಯ ಮೂಡುತ್ತದೆ.

ಹೀಗ ಅಭಿಯೋಜನೆಯು ಘಟನಾ ಸ್ಥಳವನ್ನು ಗುರುತಿಸುವಲ್ಲಿ ವಿಫಲವಾಗಿರುತ್ತದೆ. ಇದು ಈ ಪ್ರಕರಣದ ಮೇಲೆ ಗಂಭೀರ ಸಂಶಯ ಮೂಡಿಸುತ್ತದೆ.

**23.** ಎರಡನೆಯದಾಗಿ. ಈ ಪ್ರಕರಣದ ಪ್ರಮುಖ ಸಾಕ್ಷಿದಾರರ ಸಾಕ್ಷ್ಯದಲ್ಲಿ ಹಲವಾರು ಪ್ರಮುಖ ವಿರೋಧಬಾಸಾಗಳು ಅತಿಶಯೋಕ್ತಿಗಳು ಕಂಡುಬರುತ್ತವೆ. ಅಭಿಯೋಜನೆಯ ಪ್ರಕಾರ ಆರೋಪಿಗಳು ಫ್ರಾಸಾ–1 ರವರ ಮೇಲೆ ಹಲ್ಲೆ ಮಾಡಲು ಇದ್ದ ಪ್ರಮುಖ ಕಾರಣವೆಂದರೆ ಫ್ರಾಸಾ–1 ರವರು ಚಾಸಾ–4 ರವರ ಮನೆ ಹೋಗಿ ರಾಜೀ ಪಂಚಾಯಿತಿ ಮಾಡಿದ್ದಾರೆ ಎಂಬುದಾಗಿದೆ. ಆದರೆ ಫ್ರಾಸಾ–1 ರವರು ತಾನು ಚಾಸಾ–4 ರವರ ಮನೆಗೆ ಹೋಗಿ ಚಾಸಾ–4 ಮತ್ತು ಆರೋಪಿತರ ನಡುವೆ ನ್ಯಾಯ ಪಂಚಾಯಿತಿ ಮಾಡಿದ್ದೇನೆ ಎಂಬ ವಿಚಾರವನ್ನು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದಿಲ್ಲ ಮತ್ತು ಆ ಬಗ್ಗೆ ಅಭಿಯೋಜಕರ ಸೂಚನೆಯನ್ನು ಸ್ಪಷ್ಟವಾಗಿ ಅಲ್ಲೆಗಳೆದಿರುತ್ತಾರೆ. ಫ್ರಾಸಾ–3 ರವರು, ಫ್ರಾಸಾ–1 ತನ್ನ ತಾಯಿ ಚಾಸಾ–4 ರವರ ಮನೆಗೆ ಹೋಗಿ ಸ್ಟೆಟಿನ ವಿಚಾರವಾಗಿ ನ್ಯಾಯ ಪಂಚಾಯಿತಿ ಮಾಡಿರುತ್ತಾರೆ. ಅದೇ ವಿಚಾರವಾಗಿ ಈ ಘಟನೆ ನಡೆದಿರುತ್ತದೆ ಎಂದು ನುಡಿದಿದ್ದಾರೆ. ಹೀಗೆ ಫ್ರಾಸಾ–1 ಮತ್ತು ಫ್ರಾಸಾ–3 ರವರ ನಡುವೆ ಆರೋಪಿತರು ಕೃತ್ಯ ವೆಸಗಲು ಇದ್ದ ಕಾರಣದ ಬಗ್ಗೆ ಪರಸ್ಪರ ವಿರೋಧಬಾಸಗಳು ಕಂಡುಬಂದಿದ್ದು, ಇದು ಸಹ ಅಭಿಯೋಜನೆಯ ಪ್ರಕರಣದ ಮೇಲಿನ ವಿಶ್ವಾಸಾರ್ಹತೆಯನ್ನು ಕುಗ್ಗಿಸುತ್ತದೆ.

**24.** ಇನ್ನು ಫ್ರಾಸಾ–1 ರವರು, ತನಗೆ ನಿಪಿ–1 ದೂರಿನಲ್ಲಿರುವ ವಿವರ ಗೊತ್ತಿಲ್ಲ ನಿಪಿ–1 ಕ್ಕೆ ತಾನು ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಫ್ರಾಸಾ–5 ತನಿಖಾಧಿಕಾರಿ ತಾನು ಚಾಸಾ–1 ರವರು

ವಿಚಾರಿಸಿ ಅವರಿಂದ ನಿಪಿ–1 ರಂತೆ ಹೇಳಿಕೆ ದೂರನ್ನು ಪಡೆದಿದ್ದೇನೆ ಎಂದು ಸಾಕ್ಷ ನುಡಿದಿರುತ್ತಾರೆ ಆದರೆ ಫ್ರಾಸಾ–3 ರವರು ತಾನೇ ದೂರನ್ನು ಹೇಳಿ ಬರೆಸಿರುತ್ತೇನೆ ಎಂದು ನುಡಿದಿದ್ದಾರೆ. ಮತ್ತೊಂದು ಕಡೆ ಪ್ರತ್ಯಕ್ಷ ಸಾಕ್ಷಿದಾರವರ ಫ್ರಾಸಾ–2 ರವರು ಫ್ರಾಸಾ–1 ರವರು ಜ್ಞಾನ ತಪ್ಪಿದ್ದರು ಎಂದು ನುಡಿದಿದ್ದು, ಸದರಿ ಎಲ್ಲಾ ಸಾಕ್ಷಿದಾರರ ಸಾಕ್ಷ್ಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಫ್ರಾಸಾ–1 ನಿಪಿ–1 ರಂತೆ ಪೋಲೀಸರಿಗೆ ಹೇಳಿಕೆ ದೂರನ್ನು ನೀಡಿರುವ ಬಗ್ಗೆ ಗಂಭೀರ ಸಂಶಯ ಉಂಟಾಗುತ್ತದೆ. ಹೀಗೆ ಇದು ಅಭಿಯೋಜನೆಯ ಪ್ರಕರಣದ ಮೇಲಿನ ಸಂಶಯಕ್ಕೆ ಇದ್ದು ಮತ್ತಷ್ಟು ಪುಷ್ಠಿ ನೀಡುತ್ತದೆ.

**25.** ಇನ್ನು ಪ್ರತ್ಯಕ್ಷ ಸಾಕ್ಷಿದಾರರಾದ ಫ್ರಾಸಾ–2 ರವರು ಅಭಿಯೋಜನೆಗೆ ಬೆಂಬಲ್ಲ ನೀಡಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಕೋಲಿನಿಂದ ಮಡಿಕೆಗಳನ್ನು ಒಡೆದು ಹಾಕಿದ್ದರು ಎಂದು ನುಡಿದಿದ್ದಾರೆ. ಆದರೆ ಈ ಬಗ್ಗೆ ಫ್ರಾಸಾ–1 ರವರು ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ. ಅಲ್ಲದೆ ತನ್ನ ಪಾಟೀ ಸಾವಲಿನಲ್ಲಿ ನಿಖರವಾಗಿ ಯಾವ ಯಾವ ಆರೋಪಿತರು ಚಾಸಾ–1 ರವರಿಗೆ ಎಲ್ಲಿ ಹೊಡೆದಿರುತ್ತಾರೆ ಎಂದು ತನಗೆ ಹೇಳಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಅಲ್ಲದೆ ಫ್ರಾಸಾ–1 ರವರು ತನಗೆ ತುಂಬಾ ವರ್ಷಗಳಿಂದ ಪರಿಚಯಸ್ಥರಾಗಿದ್ದಾರೆ ಎಂದು ನುಡಿದಿದ್ದು, ಫ್ರಾಸಾ–2 ರವರು ಫ್ರಾಸಾ–1 ರವರ ಪಕ್ಕದಲ್ಲಿ ವ್ಯಪಾರ ಮಾಡುವವರಾಗಿದ್ದು ಅವರು ಹಿತಾಸಕ್ತಿಯುಳ್ಳ ಸಾಕ್ಷಿದಾರರೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಆದ್ದರಿಂದ ಫ್ರಾಸಾ–2 ರವರ ಸಾಕ್ಷ್ಯವನ್ನು ಸದರಿ ಮೇಲೆ ಚರ್ಚಿಸಿದ ಸಾಕ್ಷಿದಾರರ ನಡುವಿನ ವಿರೋಧಬಾಸಗಳ ಹಿನ್ನೆಲೆಯಲ್ಲಿ ನೋಡಿದಾಗ ಮತ್ತು ಫ್ರಾಸಾ–2 ರವರು ಹಿತಾಸಕ್ತಿಯುಳ್ಳ ಸಾಕ್ಷಿದಾರರಾಗಿರುವುದರಿಂದ ಇವರ ಸಾಕ್ಷ್ಯವನ್ನು ನಂಬುವುದು ಸುರಕ್ಷಿತವಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಇನ್ನು

ಫ್ರಾಸಾ–1 ರವರಿಗೆ ಉಂಟಾದ ಗಾಯಗಳ ಬಗ್ಗೆ ನೋಡುವುದಾದರೆ, ಫ್ರಾಸಾ–4 ವೈದ್ಯಾಧಿಕಾರಿಗಳು ಒಬ್ಬ ವ್ಯಕ್ತಿ ಮೇಲಿಂದ ಬಿದ್ದರೆ ಫ್ರಾಸಾ–1 ರವರಿಗೆ ಆದಂತಹ ಗಾಯಗಳು ಉಂಟಾಗುವ ಸಾಧ್ಯತೆಯನ್ನು ಅಲ್ಲಗಳೆದಿರುವುದಿಲ್ಲ, ಅಲ್ಲದೆ ಫ್ರಾಸಾ–1 ರವರು ನಿಪಿ–3 ರ ಗಾಯದ ಪ್ರಮಾಣ ಪತ್ರದಲ್ಲಿ ಫ್ರಾಸಾ–1 ರವರ ಹೇಳಿಕೆಯ ಮೇಲೆ ಗಾಯಗಳನ್ನು ನಮೂದಿಸಿದ್ದೇನೆಂದು ಸ್ಪಷ್ಟವಾಗಿ ನುಡಿದಿರುತ್ತಾರೆ. ಇದು ಫ್ರಾಸಾ–1 ರವರಿಗೆ ಉಂಟಾದ ಗಾಯಗಳ ಬಗ್ಗೆ ಸಂಶಯ ಮೂಡಿಸುತ್ತದೆ.

**26.** ಒಟ್ಟಾರೆ ಎಲ್ಲಾ ಸಾಕ್ಷ್ಯಗಳನ್ನು ಪರಿಶೀಲಿಸಿದಾಗ, ಕೃತ್ಯ ನಡೆದ ಸ್ಥಳವನ್ನು ಗುರುತಿಸುವಲ್ಲಿ ವಿಫಲತೆ, ಪ್ರಮುಖ ಸಾಕ್ಷಿದಾರರ ನಡುವಿನ ವಿರೋಧಬಾಸದ ಹೇಳಿಕೆಗಳು ಮತ್ತು ಹಿತಾಸಕ್ತಿಯುಳ್ಳ ಪ್ರತ್ಯಕ್ಷ ಸಾಕ್ಷಿದಾರರ ಹೇಳಿಕೆ ಹಾಗೂ ಫ್ರಾಸಾ–1 ರವರಿಗೆ ಉಂಟಾದ ಗಾಯಗಳ ಬಗ್ಗೆ ಅಸ್ಪಷ್ಟತೆಗಳು ಅಭಿಯೋಜನೆಯ ಪ್ರಕರಣವನ್ನು ಸಂಶಯದಿಂದ ನೋಡುವಂತೆ ಮಾಡುತ್ತವೆ. ಆದ್ದರಿಂದ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಲಾದ ಆರೋಪಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತದೆ ಎಂದು ಈ ನ್ಯಾಯಾಲಯ ಅಭಿಪ್ರಾಯ ಪಡುತ್ತದೆ. ಹೀಗಾಗಿ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡುವುದು ಈ ಸಂದರ್ಭದಲ್ಲಿ ಸಮಂಜಸವೆಂದು ತೀರ್ಮಾನಿಸಿ ಈ ನ್ಯಾಯಾಲಯವು ಈ ಮೇಲಿನ 1 ಮತ್ತು 2 ನೇ ಅಂಶಗಳನ್ನು ನಕಾರಾತ್ಮಕವಾಗಿ ಉತ್ತರಿಸಿದೆ.

**27.** ಅಂಶ ನಂ. 3 :–ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡತೆ ಆದೇಶಿಸಲಾಗಿದೆ.

:::: **ಆದೇಶ** :::

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರ ಉಪಯೋಗಿಸಿ ಕೊಂಡು 1 ರಿಂದ 3 ನೇ ಆರೋಪಿತರನ್ನು ಭಾ. ದಂ. ಸಂ. ಕಲಂ 323 ಮತ್ತು 504 ಸಹಕಲಂಃ 34 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತ ಗೊಳಿಸಲಾಗಿದೆ.

ಆರೋಪಿತರು ಹಾಗೂ ಅವರ ಜಾಮೀನು ದಾರರು ಬರೆದು ಕೊಟ್ಟಿರುವ ಸ್ವಯಂ ಮುಚ್ಚಳಿಕೆ ಹಾಗೂ ಜಾಮೀನು ಮುಚ್ಚಳಿಕೆಗಳು ಆರು ತಿಂಗಳುಗಳ ನಂತರ ರದ್ದುಗೊಳ್ಳ ತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ, ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ ಇಂದು ದಿನಾಂಕ 6 ನೇ ಏಪ್ರಿಲ್ 2025 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು).

SHRIDHARA H D

Digitally signed by SHRIDHARA H D
Date: 2026.04.08 13:20:57 +0530

(ಶ್ರೀಧರ ಹೆಚ್ ಡಿ)

ಪ್ರಧಾನ ಸಿವಿಲ್ ಮತ್ತು ಜೆ.ಎಂ. ಎಫ್. ಸಿ

ನ್ಯಾಯಾಧೀಶರು ಹಿರಿಯೂರು.

:: ಅನುಬಂಧ ::

1) ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು :

ಫ್ರಾಸಾ- 1 :- ಸರೋಜಮ್ಮ,

ಫ್ರಾಸಾ- 2 :- ಲಕ್ಕ್ಮಿದೇವಿ,

ಫ್ರಾಸಾ- 3 :- ನರಸಿಂಹಯ್ಯ,

ಫ್ರಾಸಾ- 4 :- ಡಾಃ ನಿರಂಜನ್,

ಪ್ರಾಸಾ– 5 :– ಪಿ. ಕೆ. ಇಬ್ರಾಹಿಂ ಖಲೀಲ್,

2) ಅಭಿಯೋಜನೆಯ ಪರ ಗುರುತಿಸಿದ ದಾಖಲೆಗಳು :

ನಿಪಿ–1 :– ಹೇಳಿಕೆ ದೂರು,

ನಿಪಿ–2 :– ಸ್ಥಳ ಮಹಜರು

ನಿಪಿ–3 :– ಗಾಯದ ಪ್ರಮಾಣ ಪತ್ರ

ನಿಪಿ–4 :– ಸ್ವೀಕೃತಿ,

ನಿಪಿ–5 :– ಮನವಿ ಪತ್ರ,

ನಿಪಿ–6 :– ಪ್ರಥಮ ವರ್ತಮಾನ ವರದಿ,

ನಿಪಿ–7 :– ಆಸ್ಪತ್ರೆಯ ಮೆಮೋ

3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳು :

––––––––––––––ಇರುವುದಿಲ್ಲ––––––––––––––

4) ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳು

––––––––––––––ಇರುವುದಿಲ್ಲ––––––––––––––

5) ಆರೋಪಿ ಪರ ಗುರುತಿಸಲಾದ ದಾಖಲೆಗಳು

––––––––––––––ಇರುವುದಿಲ್ಲ––––––––––––––

SHRIDHARA H D
Digitally signed by SHRIDHARA H D
Date: 2026.04.08 13:21:05 +0530

ಪ್ರಧಾನ ಸಿವಿಲ್ ಮತ್ತು ಜೆ.ಎಂ. ಎಫ್. ಸಿ
ನ್ಯಾಯಾಧೀಶರು ಹಿರಿಯೂರು.